ನಿಯಂತ್ರಣ ಮಾಡಬೇಕಾದ ಒತ್ತಡದ ಪರಿಸ್ಥಿತಿಯಲ್ಲಿ ಮನುಷ್ಯ ಮಾತ್ರರಿಂದ ಸಾಧ್ಯವಾಗದೆನಿಸಿ ರೋಬಾಟ್‌ಗಳನ್ನೇ ಈ ಕಾರ್ಯಕ್ಕೆ ಹಚ್ಚಲಾಗಿತ್ತು.

‘ಈಗ ದುರ್ಘಟನೆ ಸಂಭವಿಸಿರುವುದು ಬುಲೆಟ್ ಮೆಟ್ರೋ ನಿಲ್ದಾಣದಲ್ಲಿಯಾದರೂ ಆ ಸಮಯದಲ್ಲಿ ಬೇರೆ ಬೇರೆ ದಿಕ್ಕುಗಳಿಗೆ ಬುಲೆಟ್ ಮೆಟ್ರೋಗಳು ಚಲಿಸುತ್ತಿದ್ದು, ಇದ್ದಕ್ಕಿದ್ದಂತೆ ಒಂದಕ್ಕೊಂದು ಡಿಕ್ಕಿ ಹೊಡೆದಿವೆ. ಅದರಲ್ಲಿ ಸಾವಿಗೀಡಾದ ಪ್ರಯಾಣಿಕರು ಹೆಚ್ಚಾಗಿ ಯುವಜನರೇ ಆಗಿದ್ದು ಅವರ ಕುಟುಂಬಗಳಿಗೆ ಇದು ಭರಿಸಲಾಗದ ನಷ್ಟವಾಗಿದೆ. ಇದನ್ನೇ ಅಸ್ತ್ರವನ್ನಾಗಿ ವಿರೋಧಿ ರಾಜಕೀಯ ಬಣಗಳು ಬಳಸಿಕೊಳ್ಳುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಒಂದು ಸಂಚಾರ ಪ್ಲಟೂನ್ ಈ ಜಾಗವನ್ನು ಸಂರಕ್ಷಿಸುವ ಕೆಲಸ ಮಾಡಲಿ. ಮತ್ತೊಂದು ಸಂತ್ರಸ್ತರ ಕುಟುಂಬ ವರ್ಗದವರು ಕೇಳುವ ಮಾಹಿತಿಯನ್ನು ಒದಗಿಸಬೇಕಿದೆ. ತುರ್ತು ನಿರ್ವಹಣಾ ಘಟಕಕ್ಕೆ ಒಂದು ತಂಡ ಹೋಗಲಿ...’ ಎಂದು ಸವ್ಯಸಾಚಿ ಸಂಚಾರ ರೋಬಾಟ್ ಪೇದೆಗಳು ಹಾಗೂ ಟ್ರಾಫಿಕ್ ವಾರ್ಡನ್‌ಗಳ ಒಂದೊಂದೇ ತಂಡಕ್ಕೆ ಕರ್ತವ್ಯ ನಿಗದಿಪಡಿಸಿ ಕಳುಹಿಸಿದ್ದರು. ಕಡೆಯಲ್ಲಿ ಉಳಿದ ಮಹಿಳಾ ತಂಡವನ್ನೊಮ್ಮೆ ನಿರುಕಿಸಿ ಅದರ ನಾಯಕಿಯನ್ನು ಹತ್ತಿರ ಕರೆದಿದ್ದರು.

‘ಈ ಮಾಹಿತಿ ನಿಮಗೆ ರವಾನೆ ಮಾಡ್ತಿದ್ದೀನಿ. ಎಲ್ಲೆಡೆ ಕರ್ತವ್ಯ ನಿರ್ವಹಿಸುತ್ತಿರುವ ತಂಡಗಳ ವಿವರ ಇದರಲ್ಲಿದೆ. ನಿಮ್ಮ ಮಹಿಳಾ ತಂಡ ಒಂದೆಡೆ ಮಾತ್ರ ಕಾರ್ಯ ನಿರ್ವಹಿಸಲಾಗದು. ತಂಡದ ಕೆಲವು ಸದಸ್ಯರನ್ನು ಒಂದೊಂದೆಡೆ ಹಂಚಬೇಕಿರುತ್ತದೆ. ಪ್ರತಿ ದಿನ ನಿಮ್ಮ ವಾರ್ಡನ್ ಹೆಡ್‌ಗೆ ವರದಿ ಸಲ್ಲಿಸಬೇಕು’ ಎಂದು ಹನ್ನಾಳ ‘ಎಂಪಿ ವಾಕ್’ಗೆ ಮಾಹಿತಿ ರವಾನೆ ಮಾಡಿದಾಗ ಹನ್ನಾಳಿಗೆ ತಕ್ಷಣಕ್ಕೆ ಹೊಳೆದಿದ್ದೊಂದೇ. ತಾನು ತನ್ನ ಕಚೇರಿಗೆ ಇನ್ನು ಮೂರು ದಿನ ರಜೆ ಹಾಕಬೇಕಾಗಿದೆ ಎಂದು. ಇದು ತನ್ನದೊಬ್ಬಳದೇ ಸಮಸ್ಯೆಯಾಗಿರದೆ ನಗರದ ಸಹಸ್ರಾರು ಮಂದಿಗೂ ಇದೇ ಪರಿಸ್ಥಿತಿ ಬಂದಿರುವುದುಂಟು. ಆದರೂ ಇತರರು ಆನ್‌ಲೈನ್ ಮೂಲಕ ಮನೆಯಲ್ಲೋ ಅಥವಾ ತಾವಿರುವೆಡೆಯಿಂದ ನೆಟ್‌ವರ್ಕಿಂಗ್ ಜಾಲದಿಂದ ಕಾರ್ಯ ನಿರ್ವಹಿಸಲೇನೂ ತೊಂದರೆಯಿರಲಿಲ್ಲ. ತನಗೆ ಈ ಕೆಲಸದ ಮಧ್ಯೆ ಅದು ಸಾಧ್ಯವಾಗದಷ್ಟೇ.

ಅವಘಡ ಸಂಭವಿಸಿದ ಜಾಗಕ್ಕೆ ಅಂಡರ್‌ಗ್ರೌಂಡ್ ಸಂಚಾರ ವ್ಯವಸ್ಥೆಯ ಹೆಚ್ಚುವರಿ ಕಮೀಷನರ್ ಹಾಜರಿದ್ದು ಖುದ್ದು ಕೆಲಸದ ಮೇಲ್ವಿಚಾರಣೆ ಮಾಡತೊಡಗಿದ್ದು ಕಾಣಿಸಿತ್ತು.

ಹನ್ನಾ ತನಗೆ ನೀಡಿದ್ದ ತುರ್ತು ಘಟಕದೊಂದಿಗಿನ ಕೆಲಸಕ್ಕಾಗಿ ಮತ್ತೂ ಕೆಳಗಿಳಿಯಬೇಕಿತ್ತು. ವಿಪತ್ತು ನಿರ್ವಹಣಾ ಅಧಿಕಾರಿಗಳು ಹಾಗೂ ಮೆಟ್ರೋ ಇಂಜಿನಿಯರ್‌ಗಳ ತಂಡ ಕೆಳ ಅಂತಸ್ತುಗಳಿಗೆ ಲಿಫ್ಟ್ ಮೂಲಕ ಹೋದಾಗ ಮೆಟ್ರೋ ರೈಲು ಹಾದು ಹೋಗಲು ನಿರ್ಮಿಸಿದ ಸುರಂಗಗಳ ಸ್ಥಿತಿ ನೋಡಿ, ಹಲವೆಡೆ ಯಾವ ಅಂತಸ್ತೆಂದೂ ಸಹ ಊಹಿಸಲಾಗದಂತಹ ವಾಸ್ತವ ಪರಿಸ್ಥಿತಿ ಇದ್ದಿದ್ದನ್ನು ಕಂಡು, ಕೇವಲ ಮೂರು ದಿನಗಳಲ್ಲಿ ಎಲ್ಲವನ್ನೂ ಸರಿಪಡಿಸುವೆವು ಎಂದು ಹೇಳಿದ್ದು ತಪ್ಪಾಯಿತೆನಿಸಿತ್ತು.

ಅವರು ನಡೆಸುತ್ತಿದ್ದ ಮಾತುಕತೆ ಹನ್ನಾಳಿಗೆ ಅಷ್ಟಿಷ್ಟು ಕೇಳಿಸಿತ್ತಾದರೂ ಅವಶೇಷಗಳಡಿ ಯಾರಾದರೂ ಮನುಷ್ಯರು ಇಲ್ಲವೇ ವಸ್ತುಗಳು ಸಿಲುಕಿಕೊಂಡಿರುವುದನ್ನು ಹುಡುಕುವುದರತ್ತ ಅವಳ ಗಮನವಿತ್ತು. ಹಣೆಗೆ ಬ್ಯಾಟರಿ ಚಾಲಿತ ಟಾರ್ಚ್ ಉಳ್ಳ ಕ್ಯಾಪ್ ಧರಿಸಲಾಗಿದ್ದು ಆಳದ ಗಣಿ ಪ್ರದೇಶದೊಳಗೆ ಇಳಿದೆನೇನೋ ಎನಿಸತೊಡಗಿತ್ತು. ಮೆಟ್ರೋ ಹಾದು ಹೋಗಲಿದ್ದ ಸುರಂಗಗಳ ಕೆಳಗೆ ಅವುಗಳನ್ನು ಸುಸ್ಥಾನದಲ್ಲಿರಿಸಲು ನಿರ್ಮಿಸಿದ್ದ ಸ್ಪ್ರಿಂಗ್ ಬ್ಯಾಲೆನ್ಸರ್‌ಗಳ ಬಳಿ ಉಸಿರಾಡಲೂ ದುಸ್ತರವೆನಿಸಿದಾಗ ಮುಖಕ್ಕೆ ಆಮ್ಲಜನಕದ ಮಾಸ್ಕ್ ನೀಡಲಾಗಿತ್ತು.

‘ಸಹಾಯ ಮಾಡಿ...’ ಎಂಬ ಕ್ಷೀಣವಾದ ಧ್ವನಿ ಎಲ್ಲಿಂದಲೋ ಕೇಳಿ ಬಂದಂತೆನಿಸಿ ಸುತ್ತಲಿನ ವಸ್ತುಗಳನ್ನು ಆತುರಾತುರವಾಗಿ ಇಡೀ ತಂಡ ಜಾಲಾಡತೊಡಗಿತ್ತು.

**ಸಶೇಷ**

---

**ಯಂಡಮೂರಿ ವೀರೇಂದ್ರನಾಥ್**

ಕನ್ನಡಕ್ಕೆ: ಸಂಡೂರು ವೆಂಕಟೇಶ್

### ರೋಮಾಂಚಕಾರಿ ಧಾರಾವಾಹಿ

ನಾನು ಓದಿದ ಉತ್ತಮ ರೋಮಾಂಚಕಾರಿ ಧಾರಾವಾಹಿಗಳಲ್ಲಿ ಇದೂ ಒಂದು. ತುಂಬಾ ಚೆನ್ನಾಗಿ ಮೂಡಿ ಬಂದು ಯಾವುದೋ ಥ್ರಿಲ್ಲರ್ ಸಿನಿಮಾ ನೋಡುತ್ತಿರುವಂತೆ ಭಾಸವಾಯಿತು. ಈ ರೀತಿಯ ಧಾರಾವಾಹಿಗಳು ಹೆಚ್ಚು ಮೂಡಿಬರಲಿ.

—ವಿಜಯ್ ಮಂಜುನಾಥ್, ಬೆಂಗಳೂರು

### ಚಿಕ್ಕ ಚೊಕ್ಕ ಧಾರಾವಾಹಿ

ಕಾದಂಬರಿ ಅತ್ಯಲ್ಪ ಕಾಲದಲ್ಲಿ ಮುಗಿದಿದೆ. ಪ್ರಸ್ತುತ ಉಗ್ರವಾದಿಗಳಿಂದ ನಡೆಯುತ್ತಿರುವ ವಿಧ್ವಂಸಕ ಕೃತ್ಯಗಳ ವ್ಯೂಹ ರಚನೆಯನ್ನು ಭೇದಿಸುವ ತಂತ್ರದ ಕಥಾವಸ್ತು ಕುತೂಹಲ ಮೂಡಿಸಿತು. ಇದರಿಂದ ಧಾರಾವಾಹಿ ಸರಾಗವಾಗಿ ಓದಲು ಅನುವಾಯಿತು.

—ಸುಂದರ್ ಬೆಂಗಳೂರು

### ಕಿರಿಕಿರಿ ಮೂಡಿಸಿತು

ಕಾಲೇಜು ದಿನಗಳಿಂದಲೂ ನಾನು ಯಂಡಮೂರಿ ಅಭಿಮಾನಿ. ಆದರೆ ಈ ಕಾದಂಬರಿಯಲ್ಲಿ ಇರುತ್ತಿದ್ದ ದೋಷಗಳು ಕಿರಿಕಿರಿ ಹುಟ್ಟಿಸಿದವು. ಕಾಗುಣಿತ ದೋಷ, ಪಾತ್ರಗಳ ಹೆಸರಿನಲ್ಲಿನ ತಪ್ಪುಗಳು, ತಪ್ಪು ಶಬ್ದಗಳ ಬಳಕೆ ಹೀಗೆ... ಒಮ್ಮೆಯಂತೂ ಒಂದು ಸಾಲಿನಲ್ಲಿ ತಂದೆ, ಮುಂದಿನ ಸಾಲಿನಲ್ಲಿಯೇ ಅಜ್ಜನಾಗಿಬಿಟ್ಟಿದ್ದ!

—ಅಡವಿ ಜೋಶಿ, ಬೆಂಗಳೂರು

ಬಹಳ ವರ್ಷಗಳ ನಂತರ ಯಂಡಮೂರಿ ಕಾದಂಬರಿಯನ್ನು ಓದಿದ್ದು ಖುಷಿ ಕೊಟ್ಟಿತು.

—ರಾಜೇಶ್ವರಿ ಮೈಸೂರು

### ನಿರಾಸೆ ಮೂಡಿಸಿತು

ಯಂಡಮೂರಿಯವರ ಧಾರಾವಾಹಿ 7 ವಾರಗಳಲ್ಲಿ ಮುಗಿದಿದ್ದು ನಿರಾಸೆ ಮೂಡಿಸಿತು.

—ಎಸ್.ವಿ. ನಾಗರಾಜ್ ಬೆಂಗಳೂರು

### ಸ್ವಾರಸ್ಯ ಇಲ್ಲ

ಇದು ಏನೇನೂ ಸ್ವಾರಸ್ಯ ಇಲ್ಲದ ಸಪ್ಪೆ ಧಾರಾವಾಹಿ. ಯಾವುದೋ ಒಂದು ಘಟನೆಯ ಬಗ್ಗೆ ಸರ್ಕಾರಿ ವರದಿಯ ಹಾಗಿತ್ತು. ಯಂಡಮೂರಿ ಇವರ ಲೇಖನಿ ಮೊಂಡಾಯಿತೆ ?

—ಶಾಂತವೀರ ಎಸ್. ಚಿತ್ರದುರ್ಗ

